ಕರ್ನಾಟಕ ಸರ್ಕಾರ

# ಅಬ್ದುಲ್ ನಜ಼ೀರ್ ಸಾಬ್
# ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ,

ಲಲಿತಮಹಲ್ ರಸ್ತೆ, ಮೈಸೂರು - 570 011

---

## ಪ್ರಮಾಣ ಪತ್ರಗಳ ವಿತರಣೆ ಕುರಿತು

**2014-15** ನೇ ಸಾಲಿನಲ್ಲಿ ಕೆ.ಪಿಎಸ್.ಸಿ ವತಿಯಿಂದ ಆಯ್ಕೆಯಾದ ದ್ವಿತೀಯ ದರ್ಜೆಯ ಲೆಕ್ಕ ಸಹಾಯಕರುಗಳಿಗೆ ಸರ್ಕಾರದ ಆದೇಶದ ಮೇರೆಗೆ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯ ವತಿಯಿಂದ ಆಯ್ದ ಜಿಲ್ಲಾ ತರಬೇತಿ ಸಂಸ್ಥೆಗಳಲ್ಲಿ ಸಾಮಾನ್ಯ ಬುನಾದಿ ತರಬೇತಿ ಕಾರ್ಯಕ್ರಮವನ್ನು ದಿನಾಂಕ **29/09/2014** ರಿಂದ **31/12/2014** ರವರಗೆ ಹಾಗೂ **17/11/2014** ರಿಂದ **12/02/2015** ರವರಗೆ ಎರಡು ತಂಡಗಳಲ್ಲಿ ಆಯೋಜಿಸಲಾಗಿತ್ತು. ಮುಂದುವರೆದು ದೃಷ್ಟಿ ಮಾಂದ್ಯ ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ಒಟ್ಟು ಆರು ತಂಡಗಳಲ್ಲಿ ಸಾಮಾನ್ಯ ಬುನಾದಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿ ಇದರ ಕೊನೆಯ ತಂಡದ ತರಬೇತಿಯು ಫೆಬ್ರವರಿ **2016** ಮಾಹೆಯಲ್ಲಿ ಅಂತಿಮವಾಗಿರುತ್ತದೆ. ಸದರಿ ತರಬೇತಿ ಕಾರ್ಯಕ್ರಮದಲ್ಲಿ ಶಿಬಿರಾರ್ಥಿಗಳು ಭಾಗವಹಿಸಿ ತೃಪ್ತಿಕರವಾಗಿ ತರಬೇತಿಯನ್ನು ಪೂರೈಸಿರುವುದಕ್ಕಾಗಿ ಪ್ರಮಾಣ ಪತ್ರಗಳನ್ನು ವಿತರಿಸಲಾಗುತ್ತಿದೆ. ರಾಜ್ಯಾಂದ್ಯಂತ ಆಯ್ಕೆಯಾದ ದ್ವಿತೀಯ ದರ್ಜೆಯ ಲೆಕ್ಕ ಸಹಾಯಕರುಗಳು ಕೆಲಸ ನಿರ್ವಹಿಸುವ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಆಯಾ ಜಿಲ್ಲೆಯ ಒಟ್ಟು ಪ್ರಮಾಣ ಪತ್ರಗಳನ್ನು ರವಾನಿಸಲಾಗಿದೆ. ತರಬೇತಿಗೆ ನೋಡಲ್ ಅಧಿಕಾರಿಯಾಗಿ ಕಾರ್ಯನಿರ್ವಹಿಸಿರುವ ಜಿಲ್ಲಾ ಪಂಚಾಯಿತಿಯ ಉಪಕಾರ್ಯದರ್ಶಿರವರ ಉಸ್ತುವಾರಿಯಲ್ಲಿ ಸದರಿ ಪ್ರಮಾಣ ಪತ್ರಗಳನ್ನು ವಿತರಿಸಿ ಸ್ವೀಕೃತಿಯನ್ನು ಸಂಸ್ಥೆಗೆ ಸಲ್ಲಿಸಲು ಕೋರಲಾಗಿದೆ.

Jyothi priyadarshini
(ಜ್ಯೋತಿ ಪ್ರಿಯದರ್ಶಿನಿ)
ತರಬೇತಿ ಸಹಾಯಕರು

(ಖಾನ್ ಪರವೇಜ್)
ತರಬೇತಿ ನಿರ್ದೇಶಕರು